# ಕರಾಮುವಿ ಶೈಕ್ಷಣಿಕ ಕೋರ್ಸ್‌ಗಳಿಗೆ CBCS



ಯುಜಿಸಿ / ನ್ಯಾಕ್ ನಿಯಮದಂತೆ ಕರಾಮುವಿಯ ತನ್ನ ಸ್ನಾತಕೋತ್ತರ ಕೋರ್ಸ್‌ಗಳಿಗೆ CBCSನ್ನು 2020-21 ರಂದು ಪ್ರಾರಂಭಿಸುತ್ತಿದೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯವು ತನ್ನ ಅಧ್ಯಾಪಕರುಗಳಿಗೆ CBCS ಕುರಿತು ಒಂದು ದಿನದ ತರಬೇತಿಯನ್ನು ನೀಡಲು ಕಾರ್ಯಾಗಾರವನ್ನು 19.07.2019 ರಂದು ಕರಾಮುವಿ ಆವರಣದಲ್ಲಿ ನಡೆಸಿತ್ತು.

ಈ ಸಭೆಯಲ್ಲಿ ಡೀನ್ (ಶೈಕ್ಷಣಿಕ) ಪ್ರೊ. ಜಗದೀಶರವರು ಈ ಪದ್ಧತಿ ಬಗ್ಗೆ ಪರಿಚಯ ನೀಡುತ್ತಾ, ಯುಜಿಸಿ / ನ್ಯಾಕ್ ಆದೇಶದಂತೆ CBCS ನ್ನು ಕರಾಮುವಿಯ ಸ್ನಾತಕೋತ್ತರ ಕೋರ್ಸ್‌ಗಳಿಗೆ ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ ಎಂದರು. ಈ ಸಭೆಯಲ್ಲಿ ಮುಖ್ಯ ಅತಿಥಿಯಾಗಿದ್ದ ಕರಾಮುವಿಯ ನಿಕಟಪೂರ್ವ ಕುಲಪತಿಗಳಾದ ಪ್ರೊ. ಎನ್.ಎಸ್. ರಾಮೇಗೌಡರು ಮಾತನಾಡುತ್ತಾ, CBCS ಪದ್ಧತಿಯನ್ನು ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಮಾಡುವುದು ಸಮಂಜಸವಾಗಿದೆ ಎಂದು ತಿಳಿಸಿದರು.

ಈ ಕಾರ್ಯಾಗಾರದಲ್ಲಿ ಪ್ರೊ. ಶ್ರೀಧರ್ ಎಂ. ಮೈಸೂರು, ವಿ.ವಿ.ಯ CBCS ನೋಡಲ್ ಅಧಿಕಾರಿ, ಪ್ರೊ. ಬಿ.ರಮೇಶ್, ಕುಲಸಚಿವರು, ಕರಾಮುವಿ, ಪ್ರೊ.ಗೋಪಾಲ್ ಮರಾಠೆ, ಬಯೋಕೆಮಿಸ್ಟ್ರಿ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮತ್ತು ಪ್ರೊ.ನೂರಾಫ್ಜ್, ತುಮಕೂರು ವಿಶ್ವವಿದ್ಯಾನಿಲಯ, ಇವರುಗಳು ತಜ್ಞರಾಗಿ ಭಾಗವಹಿಸಿ ಸುಮಾರು 80 ಅಧ್ಯಾಪಕರುಗಳಿಗೆ CBCS ಬಗ್ಗೆ ತರಬೇತಿ ನೀಡಿದರು.

ಕಾರ್ಯಾಗಾರದಲ್ಲಿ ಅಧ್ಯಕ್ಷತೆ ವಹಿಸಿದ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎಸ್.ವಿದ್ಯಾಶಂಕರ್ ರವರು ಪ್ರಸ್ತುತ ಸನ್ನಿವೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿದ್ದು, ಅದನ್ನು ಕಡಿಮೆಗೊಳಿಸಿ ಹೆಚ್ಚು ಉದ್ಯೋಗ ದೊರಕಿಸಿ ಕೊಡುವಂತೆ ಮಾಡಲು ವಿಶ್ವವಿದ್ಯಾನಿಲಯವು ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು ಎಂದರು. ಈ ನಿಟ್ಟಿನಲ್ಲಿ CBCSನ್ನು 2020-21ರಲ್ಲಿ ಅನುಷ್ಠಾಗೊಳಿಸಲಾಗುವುದು ಮತ್ತು 17 ವರ್ಷದ ಹಳೆಯ ಪಠ್ಯಕ್ರಮವನ್ನು ತೆಗೆದು ಹಾಕಿ, ಕೌಶಲ್ಯಾಧಾರಿತ ಹೊಸ ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.

Scanned by CamScanner